ಅಧ್ಯಕ್ಷರು : ನಮ್ಮ ಸೆಕ್ರೆಯರಿಯಟ್‌ನಲ್ಲಿ ಮಿಸ್ಟೇಕ್ ಆಗಿರಬಹುದು.

ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮದಲ್ಲಿ ಹಣದ ದುರುಪಯೋಗ.

192(1244) ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ಯಾವ ಉದ್ದೇಶಕ್ಕೆ ಸ್ಥಾಪನೆಯಾಯಿತು.

ಆ) ಈ ನಿಗಮದಲ್ಲಿ ಜಿಲ್ಲಾ ಪಂಚಾಯತಿ ಮತ್ತು ಪರಿಶಿಷ್ಟ ಜಾತಿ ವರ್ಗಗಳ ಅಭಿವೃದ್ಧಿ ನಿಗಮದಿಂದ ಕೊಳವೆ ಬಾವಿ ಮತ್ತು ಪಂಪುಸೆಟ್ಟುಗಳಿಗೆ ಮುಂಗಡವಾಗಿ ಪಡೆದಿರುವ ಹಣ ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ನಿಗಮಕ್ಕೆ ಆಗಿರುವ ಒಟ್ಟು ನಷ್ಟ ಎಷ್ಟು ಇದಕ್ಕೆ ಹೊಣೆಗಾರರು ಯಾರು ಇದರಿಂದ ನಿಗಮದ ಸಿಬ್ಬಂದಿ ವರ್ಗಕ್ಕೆ ಕಳೆದ ಎರಡು ತಿಂಗಳಿಂದ ಮಾಸಿಕ ವೇತನ ಪಾವತಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ರೈತ ಸಮುದಾಯಕ್ಕೆ ಅವಶ್ಯವಿರುವ ಉತ್ತಮ ಗುಣಮಟ್ಟದ ಕೃಷಿ ಸಾಮಾಗ್ರಿಗಳನ್ನು ಪೂರೈಸುವ ದೃಷ್ಟಿಯಿಂದ ಕರ್ನಾಟಕ ಕೃಷಿ ಕೈಗಾರಿಕಾ ನಿಗಮವನ್ನು 1967ರಲ್ಲಿ ಪ್ರಾರಂಭಿಸಲಾಯಿತು.

ಆ) ಇಲ್ಲಾ.

ಇ) ಆದರೆ ನಿಗಮದ ಸಿಬ್ಬಂದಿಗೆ ಜನವರಿ 99 ಹಾಗೂ ಫೆಬ್ರವರಿ 99 ಮಾಹೆಗಳ ವೇತನವನ್ನು ಪಾವತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸರ್ಕಾರವು ನಿಗಮದ ಸಿಬ್ಬಂದಿಗೆ ಒಂದು ತಿಂಗಳ ವೇತನ ಪಾವತಿ ಮಾಡುವ ಸಲುವಾಗಿ ಈಗಾಗಲೇ ಆರ್ಥಿಕ ನೆರವನ್ನು ಬಿಡುಗಡೆ ಮಾಡಿದೆ.

ಈ) ನಿಗಮದ ಸಿಬ್ಬಂದಿವರ್ಗದವರಿಗೆ ಒಂದು ತಿಂಗಳ ವೇತನವನ್ನು ಪಾವತಿ ಮಾಡುವ ಸಲುವಾಗಿ ಸರ್ಕಾರವು ನಿಗಮಕ್ಕೆ ಆರ್ಥಿಕ ನೆರವು ನೀಡಿದೆ.

ಶ್ರೀ ವಿ. ಮುನಿಯಪ್ಪ :— ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮದವರು ಪರಿಶಿಷ್ಟ ವರ್ಗದ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ 7 ಕೋಟಿ 11

ಲಕ್ಷ ರೂ.ಗಳನ್ನು ಪಡೆದು ಅದು ದುರುಪಯೋಗವಾಗಿದೆ. ಇದರಲ್ಲಿ 3,54,88,888-00 ರೂ.ಗಳನ್ನು ವಾಪಸ್ಸು ಎಸ್‌ಸಿ : ಎಸ್‌ಟಿ ನಿಗಮಕ್ಕೆ ಕೊಡುವ ಸಲುವಾಗಿ ಆರ್‌ಬಿಟ್ರೇಷನ್‌ಗೆ ಹೋದಾಗ ಮಧ್ಯಸ್ಥಗಾರರು 1997ರಲ್ಲಿ ತೀರ್ಪು ನೀಡಿ ಈ ಹಣವನ್ನು ಒಂದು ತಿಂಗಳೊಳಗೆ ವಾಪಸ್ಸು ಕೊಡಬೇಕೆಂದು ಹೇಳಿದ್ದಾರೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಅಥವಾ ಇಲ್ಲವೇ? ಈ ರೀತಿ ಹೇಳಲು ಕಾರಣ ಯಾವ ಉದ್ದೇಶಕ್ಕಾಗಿ ಹಣವನ್ನು ಪಡೆಯಲಾಗಿತ್ತೋ ಆ ಉದ್ದೇಶವನ್ನು ನೆರವೇರಿಸಲು ವಿಫಲವಾಗಿದ್ದೇ ಕಾರಣವಾಗಿದೆ. ಈ ವಿಚಾರದಲ್ಲಿ ಆರ್‌ಬಿಟ್ರೇಷನ್‌ಗೆ ಹೋಗಿದ್ದು ನಿಜವೋ ಅಥವಾ ಸುಳ್ಳೋ ಎಂಬುದನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ :— ಈ ವಿಚಾರ ಆರ್‌ಬಿಟ್ರೇಶನ್‌ಗೆ ಹೋಗಿದ್ದು ನಿಜ ಮತ್ತು ಹಣವನ್ನು ವಾಪಸ್ಸು ಕೊಡಬೇಕು ಎಂದು ಹೇಳಿದ್ದೂ ಕೂಡ ನಿಜವಾಗಿದೆ. ಆದರೆ ಸರ್ಕಾರದ ಇತರೇ ಬೇರೆ ಬೇರೆ ಸಂಸ್ಥೆಗಳಿಂದಲೂ ಈ ಸಂಸ್ಥೆಗೆ ಹಣ ಬರಬೇಕಾಗಿರುವುದು ಇದೆ. ಈ ಕಾರಣದಿಂದ ತಕ್ಷಣ ಹಣ ಕೊಡುವುದಕ್ಕೆ ಆಗಿಲ್ಲ. ಬರಬೇಕಾದ ಹಣ ಬರದೇ ಇದ್ದರೆ ಆ ಹಣ ದುರುಪಯೋಗವಾಯಿತು ಎಂದು ಹೇಳುವುದಕ್ಕಾಗುವುದಿಲ್ಲ. ಹಣ ಬಾಕಿಕೊಡಬೇಕಾಗಿರುವುದು ನಿಜ ಎಂಬುದಷ್ಟನ್ನು ಮಾತ್ರ ನಾನು ಹೇಳಬಲ್ಲೆ.

ಶ್ರೀ ವಿ. ಮುನಿಯಪ್ಪ :— ಅಧ್ಯಕ್ಷರೆ, ದಿನಾಂಕ 31-3-99ರೊಳಗೆ ಎಸ್‌ಸಿ : ಎಸ್‌ಟಿ ಕಾರ್ಪೊರೇಷನ್‌ರವರು ಈ ಹಣವನ್ನು ಖರ್ಚು ಮಾಡಬೇಕಾಗಿದೆ. ಏಕೆಂದರೆ ಇದು ವಿಶೇಷವಾಗಿ ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಪಟ್ಟ ಹಣವಾಗಿದೆ. ಅಂಥ ಹಣವನ್ನು ಇವರು ಕಳೆದ ಮೂರು ವರ್ಷಗಳಿಂದ ಸದುಪಯೋಗ ಮಾಡದೇ ಹಣವನ್ನೂ ಕೂಡ ಕಾರ್ಪೊರೇಷನ್‌ಗೆ ಕೊಟ್ಟಿಲ್ಲ. ಆರ್‌ಬಿಟ್ರೇಷನ್ ತೀರ್ಮಾನವಾದರೂ ಕೂಡ ಹಣ ಕೊಡದೇ ಯಾವುದೋ ಬೇರೆ ಸಂಸ್ಥೆಗಳು ಈ ಸಂಸ್ಥೆಗೆ ಹಣ ಕೊಡಬೇಕೆಂದು ಹೇಳಿದರೆ ಹೇಗೆ? ಹಣ ದುರುಪಯೋಗವಾಗಿದೆ.ಎಂದು ಹೇಳದೆ ಮತ್ತೇನು ಹೇಳಬೇಕು? ಇದರ ಬಗ್ಗೆ ವಿಶೇಷವಾಗಿ ತನಿಖೆಯಾಗಬೇಕು.

ಅಧ್ಯಕ್ಷರು :— ಮುನಿಯಪ್ಪನವರೇ, ನೀವೂ ಕೂಡ ಮಂತ್ರಿಗಳಾಗಿದ್ದರು. ನೀವು ಸ್ವಲ್ಪ ಕೇಳಿ. ದುರುಪಯೋಗ ಎಂದರೆ ನಮ್ಮ ಆಡಳಿತ ಭಾಷೆ ಪ್ರಕಾರ ಮಿಸ್-ಅಪ್ಲಿಕೇಷನ್, ಮಿಸ್-ಅಪ್ರೊಪ್ರಿಯೇಷನ್ ಅಥವಾ ಡಿಫಾಲ್ಕೇಶನ್‌ಗಳಲ್ಲಿ ಏನಾದರೂ ಆಗಿರಬೇಕು. ಅದನ್ನು ಬಿಟ್ಟು ಪೇಮೆಂಟ್ ಕೊಡಲಿಲ್ಲ ಎಂದ ತಕ್ಷಣ ದುರುಪಯೋಗ ಎನ್ನುವುದಕ್ಕಾಗುವುದಿಲ್ಲ.

ಶ್ರೀ ವಿ. ಮುನಿಯಪ್ಪ :— ಯಾವ ಉದ್ದೇಶಕ್ಕಾಗಿ ಹಣವನ್ನು ತೆಗೆದುಕೊಳ್ಳಲಾಗುತ್ತದೆಯೋ ಅದನ್ನು ನಿಗಧಿಯಾದ ಸಮಯದೊಳಗೆ ಖರ್ಚು ಮಾಡದಿದ್ದರೆ ಅದನ್ನು ದುರುಪಯೋಗ ಎಂದೇ ಹೇಳಬೇಕಾಗುತ್ತದೆ. 3 ಕೋಟಿ 54 ಲಕ್ಷ ರೂ.ಗಳು ಖರ್ಚು ಮಾಡದೇ ಇವರ ಹತ್ತಿರವೇ ಉಳಿದುಕೊಂಡಿದೆ. ಆರ್‌ಬಿಟ್ರೇಶನ್ ಪ್ರಕಾರ

ತೀರ್ಮಾನವಾಗಿದ್ದರೂ ಕೂಡ ಇನ್ನೂ ಹಣವನ್ನು ವಾಪಸ್ಸು ಕೊಟ್ಟಿಲ್ಲ. ಹೀಗಿರುವಾಗ ಹಣದ ಸದುಪಯೋಗವಾಗಿದೆ ಎಂದು ಹೇಳುತ್ತೀರೋ ಅಥವಾ ದುರುಪಯೋಗವೆಂದು ಹೇಳುತ್ತೀರೋ?

ಶ್ರೀ ಬಿ. ಶಿವರಾಮು : — ಮಾನ್ಯ ಅಧ್ಯಕ್ಷರೆ, ಅಂಥದ್ದರ ಬಗ್ಗೆ ನಾವೂ ಕೂಡ ಸಮಿತಿಯಲ್ಲಿ ಚರ್ಚೆ ಮಾಡಿದ್ದೇವೆ. ಆಗ್ರೋ ಇಂಡಸ್ಟ್ರೀಸ್‌ರವರಿಗೆ ಹಣವನ್ನು ಕೊಟ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಜನರಿಗಾಗಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಯನ್ನು ಕೊರೆಯುವುದಕ್ಕಾಗಿ ಹೇಳಲಾಗಿತ್ತು. ಆ ಉದ್ದೇಶ ಈಡೇರದ ಕಾರಣ ಹಣದ ದುರುಪಯೋಗವಾಗಿದೆ ಎಂದು ಅವರು ಹೇಳುತ್ತಿದ್ದಾರೆ. ವಾಸ್ತವಿಕವಾಗಿ ನಾವು ಅದನ್ನೇ ಬಳಸಬೇಕಾಗುತ್ತದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಮಾತನಾಡುವಾಗ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 9 ಸಾವಿರ ಕೊಳವೆ ಬಾವಿಗಳನ್ನು ಕೊರೆದಿದ್ದೇವೆ ಎಂದು ಹೇಳಿದರು. ಕೊಟ್ಟಂಥ ಹಣ ಅಲ್ಲಲ್ಲಿಯೇ ಇದೆ, ಈ ವರ್ಷದ ಹಣವನ್ನು ಪೂರ್ಣವಾಗಿ ಉಪಯೋಗ ಮಾಡಿಲ್ಲ. ಆದಕಾರಣ ಮುನಿಯಪ್ಪನವರು ಹೇಳಿರುವುದು ಸರಿಯೇ ವಿನಃ ತಪ್ಪು ಎಂದು ಭಾವಿಸುವುದಕ್ಕಾಗುವುದಿಲ್ಲ. ಆದುದರಿಂದ ಹಣವನ್ನು ಕೊಡಿಸಿ ಬಾವಿಯನ್ನು ತೆಗೆಸುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ.

ಶ್ರೀ ಸಿ. ಭೈರೇಗೌಡ :— ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಮಾತನಾಡಿ ಹಣ ದುರುಪಯೋಗವಾಗಿಲ್ಲವೆಂದೂ ಮತ್ತು ಬಾಕಿ ಹಣವನ್ನು ಕೊಡಬೇಕಾಗಿರುವುದು ನಿಜವೆಂದು ಹೇಳಿದ್ದೇನೆ. 3,54,88,882-00 ರೂ.ಗಳನ್ನು ಇವರು ಎಸ್‌ಸಿ : ಎಸ್‌ಟಿ ನಿಗಮಕ್ಕೆ ಕೊಡಬೇಕು. ಅದೇ ರೀತಿ ಈ ಸಂಸ್ಥೆಗೆ ಸರ್ಕಾರದ ಬೇರೆ ಬೇರೆ ಇಲಾಖೆಗಳಿಂದ 3 ಕೋಟಿ 57 ಲಕ್ಷ ರೂ.ಗಳು ಬರಬೇಕಾಗಿದೆ. ಈ ಹಣ ಬಂದರೆ ಇವರು ಎಸ್‌ಸಿ : ಎಸ್‌ಟಿ ನಿಗಮಕ್ಕೆ ಹಣ ವಾಪಸ್ಸು ಕೊಡಲು ಸಾಧ್ಯವಾಗುತ್ತದೆ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ಯಾವುದೋ ಸಂಸ್ಥೆಗಳು ಹಣವನ್ನು ವಾಪಸ್ಸು ಕೊಡಬೇಕಾಗಿದೆಯಾದ ಕಾರಣ ಅವರುಗಳೆಲ್ಲಾ ಕೊಟ್ಟರೆ ಎಸ್‌ಸಿ : ಎಸ್‌ಟಿ ನಿಗಮಕ್ಕೆ ಇವರು ಹಣವನ್ನು ವಾಪಸ್ಸು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದರೆ ಹೇಗೆ? ದಿನಾಂಕ : 27-2-97 ರಲ್ಲಿಯೇ ಈ ಬಗ್ಗೆ ತೀರ್ಮಾನವಾಗಿ ಒಂದು ತಿಂಗಳಿನಲ್ಲಿ ಹಣವನ್ನು ಎಸ್‌ಸಿ : ಎಸ್‌ಟಿ ನಿಗಮಕ್ಕೆ ವಾಪಸ್ಸು ಕೊಡಬೇಕೆಂದು ಹೇಳಲಾಗಿದ್ದರೂ ಕೂಡ ಇನ್ನೂ ಕೊಟ್ಟಿಲ್ಲ. ದಿನಾಂಕ : 28-1-99 ರಲ್ಲಿಯೂ ಕೂಡ ಎಸ್‌ಸಿ : ಎಸ್‌ಟಿ ನಿಗಮದವರು ಪತ್ರ ಬರೆದು ಬಜೆಟ್ ವರ್ಷದೊಳಗೆ ಖರ್ಚು ಮಾಡಬೇಕಾಗಿರುವುದರಿಂದ ತಕ್ಷಣ ಹಣವನ್ನು ಕೊಡಬೇಕೆಂದು ಹೇಳಿದ್ದಾರೆ. ಇಷ್ಟು ಹೇಳಿದರೂ ಕೂಡ ಹಣ ಕೊಡದೇ ಇದ್ದರೆ ಇದನ್ನು ದುರುಪಯೋಗ ಎಂದು ಹೇಳದೇ ಮತ್ತೇನು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ನೀವು ಎಸ್‌ಸಿ : ಎಸ್‌ಟಿ ನಿಗಮಕ್ಕೆ ಕೊಡಬೇಕಾಗಿರುವ ಹಣಕ್ಕೆ ಬೇರೆ ಯಾವುದೋ ಸಂಸ್ಥೆಗಳಿಂದ ಬರಬೇಕಾದ ಹಣವನ್ನು ತೋರಿಸಿ ಅದಕ್ಕೆ ಈ ಹಣವನ್ನು ಅಡ್ಜೆಸ್ಟ್ ಮಾಡುವುದಕ್ಕೆ ನೋಡಿದರೆ ಅದು ಸರಿಯಲ್ಲ. ಏಕೆಂದರೆ ನೀವು ಒಂದು ಕಡೆ ಏನು ಹೇಳುತ್ತೀರೆಂದರೆ ಎಸ್‌ಸಿಪಿಯಲ್ಲಿ ಎಲ್ಲಾ ಅಮೌಂಟನ್ನು ಪೂಲ್‌ಮಾಡಿ ಈ ಜನಾಂಗದ ಅಭಿವೃದ್ಧಿಗಾಗಿ ಖರ್ಚು ಮಾಡುತ್ತೇವೆ ಎನ್ನುತ್ತೀರಿ. ಆದರೆ ಇಲ್ಲಿ ಅಡ್ವಾನ್ಸ್ ಹಣವನ್ನು ತೆಗೆದುಕೊಂಡು ಕೆಲಸವನ್ನೂ ಮಾಡದೇ ಅದನ್ನು ನಿಮ್ಮಲ್ಲಿಯೇ ಇಟ್ಟುಕೊಂಡು ಈಗ ಬೇರೆ ಇಲಾಖೆಗಳಿಂದ ನಮಗೆ ಬಾಕಿ ಬರಬೇಕಾಗಿದೆ ಆ ಹಣಕ್ಕೂ ಈ ಹಣಕ್ಕೂ ಟ್ಯಾಲಿ ಆಗುತ್ತದೆ ಎಂದು ಹೇಳಿದರೆ ನಿಮಗೆ ಏನು ಹೇಳಬೇಕೋ ಗೊತ್ತಿಲ್ಲ.

ಶ್ರೀ ಸಿ. ಭೈರೇಗೌಡ :— ಈ ಸಂಸ್ಥೆಗೆ ಯಾವ ಯಾವ ಸಂಸ್ಥೆಗಳಿಂದ ಹಣ ಬರಬೇಕಾಗಿದೆಯೋ ಅವರುಗಳನ್ನೆಲ್ಲಾ ಕರೆದು ಮಾತನಾಡಿ ಎಸ್‌ಸಿ : ಎಸ್‌ಟಿ ನಿಗಮಕ್ಕೆ ಹಣವನ್ನು ವಾಪಸ್ಸು ಕೊಡುವ ಕೆಲಸವನ್ನು ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ.

SRI M MALLIKARJUN KHARGE :— We have nothing to do with that amount. It is your headache. But why should you not implement this programme?

ಅಧ್ಯಕ್ಷರು :— ಮಾನ್ಯ ಸದಸ್ಯರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದರಲ್ಲಿ ಅರ್ಥವಿದೆ. ಎಸ್‌ಸಿ : ಎಸ್‌ಟಿ ನಿಗಮದಿಂದ ಹಣವನ್ನು ಸಂಸ್ಥೆಯವರು ಪಡೆದು ಅದನ್ನು ಅವರು ತಮ್ಮ ಬೇರೆ ವ್ಯವಹಾರಕ್ಕೆ ಬಳಸಿಕೊಂಡು ಉದ್ದೇಶ ಈಡೇರಿಸದಿರುವುದು ತಪ್ಪು. ಹೀಗಿರುವಾಗ ಹಣವನ್ನಾದರೂ ವಾಪಸ್ಸು ಮಾಡದೇ ಬೇರೆ ಸಂಸ್ಥೆಗಳಿಂದ ಏನು ಹಣ ಈ ಸಂಸ್ಥೆಗೆ ಬರಬೇಕಾಗಿದೆಯೋ ಅದನ್ನು ತೋರಿಸಿಕೊಂಡು ಎಸ್‌ಟಿ : ಎಸ್‌ಸಿ ನಿಗಮಕ್ಕೆ ಹಣ ವಾಪಸ್ಸು ಮಾಡದಿರುವುದೂ ಕೂಡ ತಪ್ಪು ಎನ್ನುತ್ತಿದ್ದಾರೆ. ಆದುದರಿಂದ ಸರ್ಕಾರ ಇದರ ಬಗ್ಗೆ ನೋಟ್ ಮಾಡಿಕೊಂಡು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಸಿ. ಭೈರೇಗೌಡ :— ಮಾನ್ಯ ಅಧ್ಯಕ್ಷರೆ, ಯಾವ ಯಾವ ಇಲಾಖೆಗಳಿಂದ ಈ ಸಂಸ್ಥೆಗೆ ಹಣ ಬರಬೇಕೋ ಅವರೆಲ್ಲರನ್ನೂ ಕರೆದು ಹಣವನ್ನು ಜಮಾ ಮಾಡಿಸುವುದಕ್ಕೆ ಮತ್ತು ಈ ಸಂಸ್ಥೆಯಿಂದ ಎಸ್‌ಸಿ : ಎಸ್‌ಟಿ ನಿಗಮಕ್ಕೆ ಏನು ಹಣ ಕೊಡಬೇಕಾಗಿದೆಯೋ ಅದನ್ನೂ ಕೂಡ ಕೊಡಿಸುದಕ್ಕೆ ಪ್ರಯತ್ನ ಮಾಡಲು ಸೂಕ್ತ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ :— ಅಧ್ಯಕ್ಷರೆ, ನಿಗಮಕ್ಕೆ ಆಗಿರುವ ನಷ್ಟದ ಬಗ್ಗೆ ನಾನು ಕೇಳಿದ್ದೆ. ಆದರೆ ಇವರು ಅದರ ಬಗ್ಗೆ ಸರ್ಕಾರ ಪ್ರಸ್ತಾಪವೇ ಮಾಡಿಲ್ಲ.

ಅಧ್ಯಕ್ಷರು :— ಮುನಿಯಪ್ಪನವರೆ ನೀವು ಸ್ವಲ್ಪ ಕೇಳಿ. ಕಡೆಯ ವರ್ಷವಾದ ಈ ವರ್ಷ ಶಾಸಕರ ದಿನಾಚರಣೆಯನ್ನು ಮಾಡುತ್ತೇವೆ. ಅದರಲ್ಲಿ ವಿಶೇಷ ಬಹುಮಾನ ಇಡುತ್ತೇವೆ. ಏಕೆಂದರೆ ಯಾರು ಸದನದಲ್ಲಿ ಆರೋಗ್ಯ ಇಲಾಖೆ, ಕೃಷಿ ಇಲಾಖೆ, ಪಶುಸಂಗೋಪನೆ, ವಸತಿ ಇಲಾಖೆ, ಪ್ರಾಥಮಿಕ ಶಿಕ್ಷಣ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳ ಬೇಡಿಕೆ ಮೇಲೆ ಯಾರು ಚೆನ್ನಾಗಿ ಭಾಷಣ ಮಾಡುತ್ತಾರೋ ಅವರಿಗೆ ಈ ವಿಶೇಷ ಬಹುಮಾನವನ್ನು ವಿಧಾನ ಮಂಡಲದಿಂದ ಕೊಡಲಾಗುತ್ತದೆ. ನಿಮಗೆ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶವಿರುತ್ತದೆ. ಆಗ ನೀವು ಚೆನ್ನಾಗಿ ಮಾತನಾಡಿ.

ಶ್ರೀ ವಿ. ಮುನಿಯಪ್ಪ :— ತಾವು ಅವಕಾಶ ಕೊಡುತ್ತೀರಿ. ಆದರೆ ನಾನು ಈಗ ಕೇಳಿರುವ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ನಿಗಮಕ್ಕೆ ಆಗಿರುವ ಒಟ್ಟು ನಷ್ಟ ಮತ್ತು ಈ ನಷ್ಟಕ್ಕೆ ಯಾರು ಹೊಣೆಗಾರರೋ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದಕ್ಕೆ ಉತ್ತರ ಬಂದಿಲ್ಲ. ನಿಗಮಕ್ಕೆ ಆಗಿರುವ ನಷ್ಟದಿಂದ ಕಳೆದ ಮೂರ್ನಾಲ್ಕು ತಿಂಗಳುಗಳಿಂದ ಅಲ್ಲಿಯ 1205 ಸಿಬ್ಬಂದಿಗೆ ಕೂಡ ಸಂಬಳ ಕೊಡುವ ಪರಿಸ್ಥಿತಿ ಇಲ್ಲವಾಗಿದೆ. ಸರ್ಕಾರ ಇದಕ್ಕೆ ನಿರ್ದಿಷ್ಟವಾದ ಉತ್ತರ ಬೇಕು.

ಅಧ್ಯಕ್ಷರು :— ಸಂಬಳ ಇಲ್ಲದೇ ಇರುವವರೇ ಇದಕ್ಕೆ ಹೊಣೆಗಾರರು.

ಶ್ರೀ ವಿ. ಮುನಿಯಪ್ಪ :— 1994-95 ರಿಂದ ಇಲ್ಲಿಯವರೆಗೆ ಎಷ್ಟು ನಷ್ಟವಾಗಿದೆ ಎಂಬುದಕ್ಕೆ ಮಾನ್ಯ ಮಂತ್ರಿಗಳಿಂದ ನನಗೆ ಉತ್ತರಬೇಕು.

ಅಧ್ಯಕ್ಷರು :— ಕೇಳುತ್ತೇನೆ, ಸುಸ್ತಾಗಿ ಬಿಡುತ್ತೇನೆ, ನಾನು, ಇವರು ಕೇಳಿದರೆ.

ಶ್ರೀ ಸಿ. ಭೈರೇಗೌಡ :— ಮಾನ್ಯ ಅಧ್ಯಕ್ಷರೇ, ಉತ್ತರ ಒದಗಿಸಿದ್ದೇನೆ. ಪ್ರಶ್ನೆಯಲ್ಲಿ ಕೊಟ್ಟಿರತಕ್ಕಂಥ ಉತ್ತರದಲ್ಲೇ ಇದೆ. ಇದು ಸರ್ವೀಸ್ ಆರ್ಗನೈಜೇಷನ್. ಈ ಸರ್ವೀಸ್ ಆರ್ಗನೈಜೇಷನ್‌ನಲ್ಲಿ ಕೆಲವು ಸಂದರ್ಭದಲ್ಲಿ ನಾವು ನಷ್ಟ ಅನುಭವಿಸಬೇಕಾಗುತ್ತದೆ. ನಾನಾ ಕಾರಣಗಳಿಂದ ನಷ್ಟ ಕೂಡ ಆಗಿದೆ. ನಷ್ಟವಾಗಿಲ್ಲವೆಂದು ನಾನು ಹೇಳುತ್ತಿಲ್ಲ. ಏಕೆಂದರೆ ದಿಢೀರ್ ಎಂದು ಗೊಬ್ಬರ ಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ಗೊಬ್ಬರದ ಬೇಡಿಕೆ ಜಾಸ್ತಿ ಆಗುತ್ತದೆ. ಆಗ ಅದರ ದಾಸ್ತಾನನ್ನು ಇಡಬೇಕಾಗುತ್ತದೆ. ಬೇಡಿಕೆ ಇದ್ದಂತಹ ಸಂದರ್ಭದಲ್ಲಿ ಗೊಬ್ಬರ ಒದಗಿಸಬೇಕಾಗಿದ್ದರೆ ಅದರ ದಾಸ್ತಾನನ್ನು ಇಡಬೇಕಾಗುತ್ತದೆ. ದಾಸ್ತಾನು ಇಡಬೇಕಾದರೆ ಗೊಬ್ಬರ ಯಾರು ತಯಾರು ಮಾಡುತ್ತಾರೆ ಅವರಿಗೆ ನಾವು ಹಣ ಕೊಟ್ಟು ತರಬೇಕಾಗುತ್ತದೆ. ಅದಕ್ಕೆ ಬಡ್ಡಿ ಎಲ್ಲಾ ಕೊಡಬೇಕಾಗುತ್ತದೆ. ಇದಕ್ಕೆ ಆಪರೇಷನಲ್ ಕಾಸ್ಟ್ಸ್ ಎಂದು ಹೇಳುತ್ತಾರೆ. ಈ ಆಪರೇಷನ್ಸ್ ಆ ರೀತಿ ಇರುವುದರಿಂದ ನಷ್ಟ ಆಗತಕ್ಕಂಥಾದ್ದು ಸ್ವಾಭಾವಿಕ. ಮತ್ತು ಇದರಲ್ಲಿ ದುರುಪಯೋಗ ಕೂಡ ಆಗಿದೆ. ಎಲ್ಲಾ ಕೂಡ ಸರಿಯಾಗಿದೆ ಎಂದು ನಾನು ಹೇಳುತ್ತಿಲ್ಲ. ಅಲ್ಲಿ ಯಾರ್‍ಯಾರು ದುರುಪಯೋಗ

ಪಡಿಸಿಕೊಂಡಿದ್ದಾರೆ ಏನು ಮಾಡಿದ್ದಾರೆ ನನಗೂ ಕೂಡ ಆದರ ಜವಾಬ್ದಾರಿ ಹೊತ್ತಿರತಕ್ಕಂಥ ಮಂತ್ರಿಯಾಗಿ ಈ ಸಂಸ್ಥೆ ಇಂತಹ ದುರ್ಗತಿಗೆ ಇಳಿದಿದೆ ಎನ್ನುವ ಬಗ್ಗೆ ಬಹಳ ಚಿಂತೆ ಮಾಡಿದೆ. ಆದುದರಿಂದ ಒಂದು ವಿಶೇಷವಾದಂತಹ ಹೈ ಲೆವೆಲ್ ಎನ್‌ಕ್ವೈರಿ ಮಾಡಬೇಕೆಂದು ಆಲೋಚನೆ ಕೂಡ ಇದೆ. ಇದು ಏಕೆ ನಷ್ಟವಾಯಿತು? ಇದಕ್ಕೆ ಯಾರು ಹೊಣೆಗಾರರು? ಅವರ ಮೇಲೆ ಯಾವರೀತಿ ಕ್ರಮ ತೆಗೆದುಕೊಳ್ಳಬೇಕು ಎಂದು ನಾನೀಗಾಗಲೇ ಚರ್ಚೆ ನಡೆಸಿದ್ದೇನೆ. ನಮ್ಮ ಅಧಿಕಾರಿಗಳಿಗೂ ಕೂಡ ಸೂಚನೆಗಳನ್ನು ಕೂಡ ಕೊಟ್ಟಿದ್ದೇವೆ. ಇದಕ್ಕೆ ಹೈ ಲೆವೆಲ್ ಎನ್‌ಕ್ವೈರಿ ಆಗಬೇಕಾದಂತಹ ಅವಶ್ಯಕತೆ ಇದೆ ಎನ್ನುವುದನ್ನು ನಾನೂ ಕೂಡ ಮನಗಂಡಿದ್ದೇನೆ. ಆ ರೀತಿಯಾದಂತಹ ಕ್ರಮಗಳನ್ನು ಸರ್ಕಾರ ಖಂಡಿತ ತೆಗೆದುಕೊಳ್ಳುತ್ತದೆ.

ಶ್ರೀ ವಿ. ಮುನಿಯಪ್ಪ :— ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು :— ಇದು ಕ್ವೆಶ್ಚನ್ ಆವರ್. ನೀವೊಬ್ಬರೇ ಅಲ್ಲ ಮೆಂಬರ್, ಬೇರೆಯವರೂ ಇದ್ದಾರೆ. ಮೆಂಬರ್‌ಗಳು. Please advise him. He should know his limits.

ಶ್ರೀ ವಿ. ಮುನಿಯಪ್ಪ :— ಕಾರ್ಪೊರೇಷನ್‌ಗೆ ಒಟ್ಟು ನಷ್ಟ ಎಷ್ಟಾಗಿದೆ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರ ಕೊಡಿಸಿಲ್ಲ. ದಯವಿಟ್ಟು ನನ್ನನ್ನೂ ಕ್ಷಮಿಸಬೇಕು. ನನ್ನ ಪ್ರಶ್ನೆಗೆ ಉತ್ತರ ಬರದೇ ಇದ್ದರೆ ನನ್ನ ಹಕ್ಕುಚ್ಯುತಿ ಮಾಡಬಾರದು. ನಾನು ಕೇಳಿರತಕ್ಕಂಥ ಪ್ರಶ್ನೆಗೆ...

ಅಧ್ಯಕ್ಷರು :— ನೀವೊ ಬೇರೆ ಸದಸ್ಯರ ಹಕ್ಕಿನ ಚ್ಯುತಿ ಮಾಡುವುದಕ್ಕಾಗುವುದಿಲ್ಲ. ನೀವೊಬ್ಬರೇ ಅಲ್ಲ ಸದಸ್ಯರು ಕುಳಿತುಕೊಳ್ಳಿ.

ಶ್ರೀ ವಿ. ಮುನಿಯಪ್ಪ :— ನನಗೆ ಉತ್ತರ ಬರಲಿಲ್ಲ ಮಾನ್ಯ ಅಧ್ಯಕ್ಷರೇ, ಇದಕ್ಕೆ ದಯವಿಟ್ಟು ಉತ್ತರ ಕೊಡಿಸಿಬಿಡಿ. ಏಕೆ ಈ ತರಹ ಮಾಡುತ್ತಿದ್ದೀರಿ?

ಅಧ್ಯಕ್ಷರು :— ಅವರು ತಿಳಿದುಕೊಳ್ಳಬೇಕು, ಈಗಾಗಲೇ ಆರು ಉಪಪ್ರಶ್ನೆ ಕೇಳಿದ್ದಾರೆ. Again he wants to talk.

ಶ್ರೀ ವಿ. ಮುನಿಯಪ್ಪ :— ಉತ್ತರ ಕೊಡದೇ ಇದ್ದರೆ ಹೇಗೆ? ನಿರ್ದಿಷ್ಟವಾದಂತಹ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ಎಷ್ಟು ನಷ್ಟವಾಗಿದೆ ಎಂದು ಕೇಳಿದ್ದೇನೆ.

ಅಧ್ಯಕ್ಷರು :— ನಮ್ಮ ನಡವಳಿಕೆಗಳನ್ನು ಒಂದು ಸಲ ಓದಿಕೊಳ್ಳಿ.

ಶ್ರೀ ವಿ. ಮುನಿಯಪ್ಪ :— ನಡವಳಿಕೆಗಳನ್ನು ಓದಿಕೊಂಡಿದ್ದೇನೆ. ನಾನು ಮೊದಲನೆ ಸಲ ಅಲ್ಲ ಈ ಮನೆಗೆ ಮೂರನೇ ಸಲ ಬರುತ್ತಿದ್ದೇನೆ.

ಅಧ್ಯಕ್ಷರು :— ಅದಕ್ಕೇ ಓದಿಕೊಂಡಿಲ್ಲ, ಓದಿ ಎಂದು ಹೇಳುವುದು.

ಶ್ರೀ ವಿ. ಮುನಿಯಪ್ಪ : — ನಿರ್ದಿಷ್ಟವಾದಂತಹ ಉತ್ತರ ಬರದೇ ಇದ್ದಾಗೆ ನಾವು ಕೇಳಬೇಕಾಗುತ್ತದೆ.

MR. SPEAKER :— I will have to take action against him, Mr. Kharge. Can he compel me to give a specific answer? No, No. Impossible. I am not re-opening that question. You please go ahead. I cannot compel the Minister to give him a specific answer.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿರ್ದಿಷ್ಟವಾದ ಉತ್ತರ ಕೊಟ್ಟರೆ ಏಕೆ ಕೇಳುತ್ತಾರೆ? ಅವರು ಏಕೆ ಕೊಡಬಾರದು?

MR. SPEAKER : I cannot to compel a Minister to give an answer to his satisfaction.

SHRI MALLIKARJUN KHARGE :— Sir, we have got every right to get the information from the Minister.

MR. SPEAKER :— Yes, Minister has given th answer that he has. If he not satisfied, it is for him to do what he wants. He cannot hold the Assembly to ransom.

SRI MALLIKARJUN KHARGE :— We have seen how many people are holding the Assembly to ransom, how many people are getting the benefit out of this. We also know that.

MR. SPEAKER :— Then what do you want me to do? You want me to close the Question House or you want me to leave it to him? I shall leave it to him. You conduct the House.

SHRI MALLIKARJUN KHARGE :— Sir, you listen to me

MR. SPEAKER :— This is not the way. I have given him six supplementaries. Can I compel the Minister to give the answer that he wants?

SHRI MALLIKARJUN KHARGE :— But he purposely avoided that answer.

MR. SPEAKER :— I am not here to compel a Minister to give the answer that we wants. It is not within the jurisdiction of the Chair.

SHRI MALLIKARJUN KHARGE :— We don't expect that. But when we put the question he should come with preparation for the supplementaries.

MR. SPEAKER :— Please understand my difficulty. I am the Presiding Officer. I have to complete the questions. I have to give opportunity to all other members. He cannot insist. Minister has to give the replies. I cannot ask him to give such a particular reply.

ಶ್ರೀ ಎಂ. ಮಲ್ಲಿಕಾರ್ಜುನ :— ಖರ್ಗೆ ಉತ್ತರ ಅನೇಕ ಬಾರಿ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು :— ನಾನು ಯಾವುದೂ ಹೇಳುತ್ತಾ ಇಲ್ಲ. ಉತ್ತರ ಹೀಗೆ ಕೊಡಿ ಎಂದು ಹೇಗೆ ಹೇಳುವುದಕ್ಕಾಗುತ್ತದೆ?

(ಗೊಂದಲ)

SHRI K.N. NAGE GOWDA :— Sir, let them read the Rules first. No member can compel the Government to give a specific answer. Members do not have any right to compel the Government. It is in the Rules.

SRI J.C. MADHUSWAMY :— Sir, I am on a point of order. Can a Minister tell the House "I am not going to answer"? When it is a Starred Question, how can you say you cannot answer? ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಹೌಸ್‌ನಲ್ಲಿ ಕುಳಿತುಕೊಂಡು ನಾನು ಉತ್ತರ ಕೊಡುವುದಿಲ್ಲ ಎಂದರೆ ಏನು ಅರ್ಥ?

ಶ್ರೀ ಸಿ. ಬೈರೇಗೌಡ :— ಇದಕ್ಕೆ ಸಂಬಂಧಪಟ್ಟಹಾಗೆ ಪ್ರಶ್ನೆ ಇರುವುದಾದರೆ ಮಾತ್ರ ಉತ್ತರ ಕೊಡುವುದು ಉಂಟು.

ಶ್ರೀ ಜೆ.ಸಿ. ಮಾಧುಸ್ವಾಮಿ :— ತಾವು ಹೇಳಬೇಕಾಗಿಲ್ಲ. ನಾನು ಉತ್ತರ ಕೊಡುವುದಿಲ್ಲ ಎಂದರೆ....

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ :— ಚುಕ್ಕೆ ಗುರುತಿನ ಪ್ರಶ್ನೆಗೆ ಮೆಂಬರ್ ಎರಡು ಉಪಪ್ರಶ್ನೆ ಇದ್ದರೆ ಅಧ್ಯಕ್ಷರು ಅನುಮತಿ ಕೊಡುತ್ತಾರೆ. ಆದರೆ ತಾವು ಆರು ಉಪಪ್ರಶ್ನೆಗೆ ಅವಕಾಶ ಕೊಟ್ಟಿರಿ. ಇದು ಪ್ರಶ್ನೋತ್ತರ ಸಮಯ. ಪ್ರಶ್ನೋತ್ತರ ವೇಳೆಯಲ್ಲಿ ಸ್ಟಾರ್ಡ್ ಕ್ವೊಶ್ಚನ್‌ಗೆ ಏನೂ ರೂಲ್ಸ್ ಇದೆ ಎನ್ನುವುದನ್ನು ದಯವಿಟ್ಟು ಮಾನ್ಯ ವಿರೋಧಪಕ್ಷದ ನಾಯಕರು ಓದಿ ಸದಸ್ಯರಿಗೆ ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ನಿಮ್ಮಿಂದ ಕಲಿಯಬೇಕಾಗಿಲ್ಲ.

ಶ್ರೀ ಕೆ.ಎನ್. ನಾಗೇಗೌಡ :— ಕಲಿಯಬೇಕು ನೀವು. ಏಕೆ ಕಲಿಯಬಾರದು? If I am right, you should learn. If I am wrong, you should teach me.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಕ್ವೊಶ್ಚನ್ ಕೇಳುವುದಕ್ಕೆ ಅಲೋ ಮಾಡುವುದು, ಬಿಡುವುದು ತಮ್ಮ ವಿವೇಚನೆಗೆ ಬಿಟ್ಟಿದ್ದು. ತಾವು ರೆಲವೆನ್ಸ್ ಅನ್ನು ನೋಡಿ ಎಷ್ಟು ಉಪಪ್ರಶ್ನೆ ಕೇಳುವುದಕ್ಕೆ ಅಲೋ ಮಾಡಬಹುದು ಎನ್ನುವ ಅಧಿಕಾರವನ್ನು ತಮಗೆ ಶಾಸನಸಭೆ ಕೊಟ್ಟಿದೆ. ಆದರೆ ನಮ್ಮ ಪ್ರಶ್ನೆ, ಇರೆಲವೆಂಟ್ ಸಪ್ಲಿಮೆಂಟರಿ ಅನ್ನು ಅವರು ಹೇಳುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಆದರೆ ಸಭೆಯಲ್ಲಿ ನಿಂತುಕೊಂಡು ನಾನು ಉತ್ತರ ಹೇಳುವುದಿಲ್ಲವೆಂದು ಹೇಳಬಾರದು.

ಮಾನ್ಯ ಸದಸ್ಯರು :— ಇಲ್ಲಿ ಯಾವ ರೀತಿ ಮಾತನಾಡಬೇಕು ಎಂದು ಯೋಚನೆ ಮಾಡಬೇಕು. ರೂಲ್ಸ್ ಅನ್ನು ಓದಿಕೊಂಡು ಮಾತನಾಡಬೇಕು. ಆದರೆ ಇಲ್ಲಿ ಪೂರ್ವಗ್ರಹ ಪೀಡಿತರಾಗಿ ಯಾವುದೇ ರಾಜಕಾರಣಿಗಳು ಮಾತನಾಡಬಾರದು. ಅವರು ಸದಸ್ಯರಾಗಲಿ ಸಚಿವರಾಗಲಿ.

MR. SPEAKER :— I am aware of the Rules. Unfortunately Speaker has to know the Rules. Members need not know the Rules.

That is the whole problem. People who are not conversant with the practices of the House, who are not regularly attending the House, when they get irked, they want to create a situation as if the Speaker is taking sides. I would throw a challenge to anybody to come and see the proceedings of this House as to how many opportunities the members of the Opposition have got in last five years.

ಶ್ರೀ ವಿ. ಮುನಿಯಪ್ಪ :— ಪ್ರೊಸೀಜರ್ ಪ್ರಕಾರ ಪಬ್ಲಿಕ್ ಇಂಪಾರ್ಟೆನ್ಸ್ ಇದ್ದರೆ ಏನಾದರೂ ವಿವರಣೆ ಕೇಳುವುದಕ್ಕೆ ಅದಕ್ಕೆ ಒಂದು ಕನ್‌ವೆನ್‌ಷನ್ ಇದೆ. ಅದರ ಮೇಲೆ ಕೇಳುತ್ತಿದ್ದೇನೆ ಅಷ್ಟೆ.

ಶ್ರೀ ಎನ್. ರಾಜಣ್ಣ :— ಮಾನ್ಯ ಸಭಾಧ್ಯಕ್ಷರೇ, ದಿನಾಂಕ : 24-3-99ರಂದು 10ನೇ ಪಟ್ಟಿಯಲ್ಲಿರುವ ನನ್ನ ಪ್ರಶ್ನೆಗೆ...

ಅಧ್ಯಕ್ಷರು :— ಹೆಲ್ಡ್‌ಓವರ್ ಕ್ವೊಶ್ಚನ್ ಅದನ್ನು ನಾಳೆ ಕೇಳಿ. ಈಗ ಕ್ವೊಶ್ಚನ್ ಅವರ್ ಕ್ಲೋಸ್ ಮಾಡುತ್ತಿದ್ದೇನೆ. ಈಗ ಶೂನ್ಯವೇಳೆ. ಮಾಧುಸ್ವಾಮಿಯವರೆ ಶೂನ್ಯವೇಳೆಯಲ್ಲಿ ತಮ್ಮ ವಿಚಾರ ಪ್ರಸ್ತಾಪ ಮಾಡಿ.

ಶ್ರೀ ವಾಟಾಳ್ ನಾಗರಾಜ್ :— ತಮ್ಮ ಮನಸ್ಸಿಗೆ ನೋವಾಗುವಂತಾದ್ದು ಆಗಬಾರದು.

ಅಧ್ಯಕ್ಷರು :— ಸಭಾಧ್ಯಕ್ಷರು ಆಗುವವರಿಗೆ ಮನಸ್ಸು ಇರುತ್ತದೆಯೇ? ಸಭಾಧ್ಯಕ್ಷರಾಗಿ ಕೆಲಸ ಮಾಡುವವರಿಗೆ ಮರ್ಯಾದೆ, ಮನಸ್ಸು ಇರುತ್ತದೆ ಏನ್ರಿ?

ಶ್ರೀ ವಾಟಾಳ್ ನಾಗರಾಜ್ :— ನೀವು ದಯವಿಟ್ಟು ಕುಳಿತುಕೊಳ್ಳಿ.

ಅಧ್ಯಕ್ಷರು :— ನಾನು ಎಲ್ಲೂ ಹೋಗುವುದಿಲ್ಲ. ನನಗೆ ಸ್ವಲ್ಪ ಕೆಲಸ ಇದೆ. ಉಪಾಧ್ಯಕ್ಷರು ಕುಳಿತುಕೊಂಡಿದ್ದಾರೆ. 10 ನಿಮಿಷ ಕೆಲಸ ಇದೆ. ಸಭಾಧ್ಯಕ್ಷರು ಆಗುವವರಿಗೆ ಮನಸ್ಸು, ಮರ್ಯಾದೆ ಎರಡು ಇರುತ್ತದೆಯೇ?

(ಈ ಹಂತದಲ್ಲಿ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಕೆ.ಎನ್. ನಾಗೇಗೌಡ :— ವಿರೋಧಪಕ್ಷದ ನಾಯಕರು, ಲರ್ನ್ಡ್ ಮೆಂಬರ್ಸ್ ಈ ಸದನವನ್ನು ಯಾವ್ಯಾವ ರೀತಿ ಉಪಯೋಗಿಸಿಕೊಳ್ಳುತ್ತಾರೆ ಎಂದು ಹೇಳಿದರೆ He is insulting the Chair. ಎರಡು ಉಪಪ್ರಶ್ನೆ ಕೇಳುವುದಕ್ಕೆ ಪ್ರಾವಿಜನ್ ಇದೆ. ಅದನ್ನು ಅರ್ಥ ಮಾಡಿಕೊಳ್ಳದೆ ಇದ್ದರೆ ಯಾರಿಗಾದರೂ ಸಿಟ್ಟು ಬರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಉಪಾಧ್ಯಕ್ಷರೇ, ನಿಲುವಳಿ ಸೂಚನೆ ನಿಯಮ 60ರ ಪ್ರಕಾರ ನಾನು ಕಳುಹಿಸಿದ್ದೇನೆ. ಪ್ರಶ್ನೋತ್ತರ ಆದತಕ್ಷಣ ಮಾತನಾಡುವುದಕ್ಕೆ ಅವಕಾಶ ನಾನು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು :— ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, 13ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಬಗರ್ ಹುಕಂ ಮಂಜೂರಾತಿ ತಿದ್ದುಪಡಿ.

873(1324) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಗರ್ ಹುಕುಂ ಮಂಜೂರಾತಿಗಾಗಿ ಇತ್ತೀಚಿನ ತಿದ್ದುಪಡಿಯಂತೆ ಫಾರಂ 53ರಲ್ಲಿ ಇದುವರೆಗೆ ರಾಜ್ಯಾದ್ಯಂತ ಬಂದ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಅರ್ಜಿಗಳ ಪರಿಶೀಲನೆಯನ್ನು ಯಾವಾಗಿನಿಂದ ಆರಂಭಿಸಲಾಗುವುದು;

ಇ) ಬಂದಿರುವ ಅರ್ಜಿಗಳ ಬಗ್ಗೆ ಪರಿಶೀಲನೆ ಜಿಲ್ಲಾಧಿಕಾರಿಯವರಿಗೆ ಕೊಟ್ಟಿರುವುದರಿಂದ ಜಿಲ್ಲಾಧಿಕಾರಿಗಳ ಇತರೆ ಹೊಣೆಗಾರಿಕೆಗಳೊಂದಿಗೆ ಈ ಅರ್ಜಿಗಳ ಪರಿಶೀಲನೆ ಕಷ್ಟ ಸಾಧ್ಯ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಜಿಲ್ಲಾಧಿಕಾರಿ ಬದಲಿಗೆ ಅರ್ಜಿಗಳ ಪರಿಶೀಲನೆಗಾಗಿ ಈಗಿರುವ ಸಮಿತಿಗೆ ವಹಿಸಿಕೊಡುವ ಬಗ್ಗೆ ಸರ್ಕಾರ ಪರಿಶೀಲಿಸುವುದೆ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ)ಬಗರ್ ಹುಕುಂ ಸಾಗುವಳಿ ಜಮೀನನ್ನು ಸಕ್ರಮೀಕರಣಗೊಳಿಸಲು ನಮೂನೆ 53ರಲ್ಲಿ ಅರ್ಜಿ ಸಲ್ಲಿಸುವುದಕ್ಕಾಗಿ ದಿನಾಂಕ : 30-4-1999ರ ವರೆಗೆ ಕಾಲಾವಕಾಶವನ್ನು ನೀಡಲಾಗಿದೆ. ಈ ಅವಧಿ ಮುಗಿದ ನಂತರ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ಎಂಬುದು ತಿಳಿದು ಬರುತ್ತದೆ.